ಹಜ್ ಮತ್ತು ವಕ್ಫ್ ಇಲಾಖೆಯಿಂದ ಮಂಜೂರಾಗಿರುವ ಕಾಮಗಾರಿಗಳ ಬಗ್ಗೆ

(204) 329

ಶ್ರೀ ಡಾ. ಶರಣ ಪ್ರಕಾಶ ರುದ್ರಪ್ಪ ಪಾಟೀಲ್ (ಸೇಡಂ)

ಅ) ಸೇಡಂ ಮತ ಕ್ಷೇತ್ರಕ್ಕೆ ಹಜ್ ಮತ್ತು ವಕ್ಫ್ ಇಲಾಖೆಯಿಂದ 2011–12ನೇ ಸಾಲಿನಲ್ಲಿ ಮಂಜೂರಾದ ಅನುದಾನವೆಷ್ಟು?

ಆ) ಈ ಸಾಲಿನಲ್ಲಿ ಮಂಜೂರಾದ ಕಾಮಗಾರಿಗಳಾವುವು? ಆ ಪೈಕಿ ಎಷ್ಟು ಕಾಮಗಾರಿಗಳಿಗೆ ಯಾವಾಗ ಮಂಜೂರಾತಿ ನೀಡಲಾಗಿದೆ?

ಇ) ನೀಡದ್ದಲ್ಲಿ ಯಾವಾಗ ನೀಡಲಾಗಿದೆ(ವಿವರ ನೀಡುವುದು)?

ಶ್ರೀ ಎಸ್.ಕೆ ಬೆಳ್ಳುಬಿ ಕೃಷಿ ಮಾರುಕಟ್ಟೆ, ಹಜ್ ಮತ್ತು ವಕ್ಫ್ ಸಚಿವರು.

ಅ) 2011–12ನೇ ಸಾಲಿನಲ್ಲಿ ಸೇಡಂ ಮತಕ್ಷೇತ್ರಕ್ಕೆ ಹಜ್ ಮತ್ತು ವಕ್ಫ್ ಇಲಾಖೆಯಿಂದ ಯಾವುದೇ ಅನುದಾನ ಮಂಜೂರಾಗಿರುವುದಿಲ್ಲ.

ಆ) ಅನ್ವಯಿಸುವುದಿಲ್ಲ.

ಇ) ಅನ್ವಯಿಸುವುದಿಲ್ಲ.

ಸಂಧ್ಯಾ ಸುರಕ್ಷಾ ಯೋಜನೆ ಮಂಜೂರಾತಿ

(248) 367

ಮಾನ್ಯ ಶ್ರೀ ನರೇಂದ್ರಬಾಬು (ಮಹಾಲಕ್ಷ್ಮಿ ಲೇಔಟ್) ವಿಧಾನ ಸಭೆ ಸದಸ್ಯರು

ಅ) ಮಹಾಲಕ್ಷ್ಮಿ ಬಡಾವಣೆ ವಿಧಾನಸಭಾ ಕ್ಷೇತ್ರದಲ್ಲಿ ಸಂಧ್ಯಾ ಸುರಕ್ಷಾ ಯೋಜನೆ, ಅಂಗವಿಕಲರ ವೇತನ, ವಿಧವಾ ವೇತನ ಹಾಗೂ ವೃದ್ಧಾಪ್ಯ ವೇತನಕ್ಕಾಗಿ ಸ್ವೀಕರಿಸಿರುವ ಅರ್ಜಿಗಳೆಷ್ಟು?

ಆ) ವಿವಿಧ ಯೋಜನೆಗಳಡಿ ಬಂದಿರುವ ಅರ್ಜಿಗಳಲ್ಲಿ ಮಂಜೂರು ಮಾಡಿ ಪಿಂಚಣಿ ಬಿಡುಗಡೆಯಾಗಿರುವ ಅರ್ಜಿಗಳೆಷ್ಟು?

ಇ) ಬಾಕಿ ಉಳಿದಿರುವ ಅರ್ಜಿಗಳನ್ನು ಇತ್ಯರ್ಥಗೊಳಿಸಿ ಪಿಂಚಣಿ ಬಿಡುಗಡೆ ಮಾಡಲು ಇಲಾಖೆಗೆ ಇರುವ ತೊಂದರೆಗಳೇನು?

ಈ) ಹೊಸದಾಗಿ ಸ್ವೀಕರಿಸಿರುವ ಅರ್ಜಿಗಳೆಷ್ಟು?

ಪಿಂಚಣಿ ಹಣ ರದ್ದುಪಡಿಸಿರುವ ಪಿಂಚಣಿದಾರರಿಗೆ ಮರು ಮಂಜೂರಾತಿಗೆ ಅರ್ಜಿ ಸಲ್ಲಿಸಲು ಅವಧಿಯನ್ನು ನಿಗಧಿಪಡಿಸಲಾಗಿದೆಯೇ?

ಉ) ಹೊಸದಾಗಿ ಬಂದಿರುವ ಅರ್ಜಿದಾರರಿಗೆ ಎಂದು ಪಿಂಚಣಿ ಮಂಜೂರು ಮಾಡಲಾಗುವುದು?

ಊ) ಎಸ್.ಎಸ್.ಎ.ಪಿ ರಾಷ್ಟ್ರೀಯ ಕುಟುಂಬ ಹಿತ ಯೋಜನೆಯಡಿ ಫಲಾನುಭವಿಗಳಾದ ನಿರ್ಗತಿಕ ವಿಧವೆಯರಿಗೆ ಪಿಂಚಣಿ ನೀಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ?

ಶ್ರೀ ಕೆ.ಎಸ್ ಈಶ್ವರಪ್ಪ ಉಪ ಮುಖ್ಯಮಂತ್ರಿ (ಕಂದಾಯ)

ಅ) ಮಹಾಲಕ್ಷ್ಮಿ ಬಡಾವಣೆ ವಿಧಾನಸಭಾ ಕ್ಷೇತ್ರದಲ್ಲಿ 2012–13ನೇ ಸಾಲಿನಲ್ಲಿ ವಿವಿಧ ಸಾಮಾಜಿಕ ಭದ್ರತಾ ಯೋಜನೆಗಳಡಿ ಒಟ್ಟು 125 ಅರ್ಜಿಗಳನ್ನು ಸ್ವೀಕರಿಸಿದ್ದು, ಯೋಜನೆ ವಿವರ ಕೆಳಕಂಡಂತಿದೆ.

ಕ್ರ.ಸಂ	ಯೋಜನೆ ಹೆಸರು	ಸ್ವೀಕೃತಿ
1	ವೃದ್ಧಾಪ್ಯ ವೇತನ	0
2	ಅಂಗವಿಕಲ ವೇತನ	23
3	ವಿಧವಾ ವೇತನ	51
4	ಸಂಧ್ಯಾ ಸುರಕ್ಷಾ	51
	ಒಟ್ಟು	125

ಆ) ವಿವಿಧ ಸಾಮಾಜಿಕ ಭದ್ರತಾ ಯೋಜನೆಗಳಡಿ 2012–13ನೇ ಸಾಲಿನಲ್ಲಿ ಮಂಜೂರು ಮಾಡಿ ಮಹಾಲಕ್ಷ್ಮಿ ಬಡಾವಣೆ ವಿಧಾನಸಭಾ ಕ್ಷೇತ್ರದಲ್ಲಿ ಅರ್ಹ ಫಲಾನುಭವಿಗಳು ಮಾಸಾಶನ ಪಡೆಯುತ್ತಿರುವ ವಿವರ ಕೆಳಕಂಡಂತಿದೆ.

ಕ್ರ.ಸಂ	ಯೋಜನೆ ಹೆಸರು	ಮಾಸಾಸನ ಪಡೆಯುತ್ತಿರುವ ಫಲಾನುಭವಿಗಳ ಸಂಖ್ಯೆ
1	ವೃದ್ಧಾಪ್ಯ ವೇತನ	0
2	ಅಂಗವಿಕಲ ವೇತನ	12
3	ವಿಧವಾ ವೇತನ	21
4	ಸಂಧ್ಯಾ ಸುರಕ್ಷಾ	41
	ಒಟ್ಟು	74

ಇ) 2012–13 ನೇ ಸಾಲಿಗಿಂತ ಹಿಂದಿನ ಯಾವುದೇ ಅರ್ಜಿಗಳು ಬಾಕಿ ಇರುವುದಿಲ್ಲ ಹಾಗೂ ಪ್ರಸ್ತುತ ಸಾಲಿನಲ್ಲಿ ಬಾಕಿ ಉಳಿದಿರುವ ಅರ್ಜಿಗಳು ಭೌತಿಕ ಪರಿಶೀಲನೆಗೆ ಒಳಪಡಿಸಿದ್ದು, ತ್ವರಿತವಾಗಿ ಇತ್ಯರ್ಥಗೊಳಿಸಲು ಕ್ರಮವಹಿಸಲಾಗಿದೆ.

ಈ) ವಿವಿಧ ಸಾಮಾಜಿಕ ಭದ್ರತಾ ಯೋಜನೆಗಳಡಿ ಹೊಸದಾಗಿ ಒಟ್ಟು 125 ಅರ್ಜಿಗಳನ್ನು ಸ್ವೀಕರಿಸಲಾಗಿದೆ ಹಾಗೂ ಮಂಜೂರಾತಿಗೆ ಅರ್ಜಿ ಸಲ್ಲಿಸಲು ದಿನಾಂಕ 31.12.2012 ರವರೆಗೆ ಕೊನೆಯ ದಿನಾಂಕವನ್ನು ನಿಗದಿಗೊಳಿಸಲಾಗಿತ್ತು.

ಉ) ವಿವಿಧ ಸಾಮಾಜಿಕ ಭದ್ರತಾ ಯೋಜನೆಗಳಡಿ ಅರ್ಹ ಫಲಾನುಭವಿಗಳು ಅರ್ಜಿ ಸಲ್ಲಿಸಿದ 70 ದಿನದೊಳಗಾಗಿ ಪಿಂಚಣಿ ಮಂಜೂರಿ ಮಾಡಲಾಗುವುದು.

ಊ) ರಾಷ್ಟ್ರೀಯ ಕುಟುಂಬ ನೆರವು ಯೋಜನೆಯಡಿ ಸಹಾಯಧನ ಪಡೆದ ಅರ್ಹ ಫಲಾನುಭವಿ ನಿರ್ಗತಿಕ ವಿಧವಾ ವೇತನದಡಿ ಅರ್ಜಿ ಸಲ್ಲಿಸಬಹುದು.

ಅಲ್ಪಸಂಖ್ಯಾತರ ಅಭಿವೃದ್ಧಿಗಾಗಿ ಖರ್ಚಾದ ಹಣ
(206) 279
ಶ್ರೀ ಈಶ್ವರ್ ಭೀಮಣ್ಣ ಖಂಡ್ರೆ (ಭಾಲ್ಕಿ)

ಅ) ಬೀದರ್ ಜಿಲ್ಲೆಯಲ್ಲಿ ಅಲ್ಪಸಂಖ್ಯಾತರ ಅಭಿವೃದ್ಧಿಗಾಗಿ ಸರ್ಕಾರ ತೆಗೆದುಕೊಂಡಿರುವ ಕಾರ್ಯಕ್ರಮ ಹಾಗೂ ಯೋಜನೆಗಳೇನು (ವಿವರ ನೀಡುವುದು)

ಆ) ಅಲ್ಪಸಂಖ್ಯಾತರ ಅಭಿವೃದ್ಧಿಗಾಗಿ ಗಂಗಾ ಕಲ್ಯಾಣ ಹಾಗೂ ಇನ್ನಿತರೆ ಯೋಜನೆಗಳಲ್ಲಿ ಜಿಲ್ಲೆಗೆ ಇದುವರೆಗೂ ಎಷ್ಟು ಹಣ ಬಿಡುಗಡೆಯಾಗಿದೆ? ಆ ಪೈಕಿ ಎಷ್ಟು ಖರ್ಚಾಗಿದೆ ಹಾಗೂ ಎಷ್ಟು ಬಾಕಿ ಉಳಿದಿದೆ(ಸಂಪೂರ್ಣ ವಿವರ ನೀಡುವುದು)

ಇ) ಈ ರೀತಿ ಬಾಕಿ ಉಳಿದ ಅನುದಾನವನ್ನು ಎಷ್ಟು ಕಾಲ ಮಿತಿಯೊಳಗೆ ಬಳಕೆ ಮಾಡಲಾಗುವುದು?